ವಿಷಯ:- 'ಆ' ದರ್ಜೆ ಮಾರುಕಟ್ಟೆ ಸಮಿತಿಗೆ ಸರ್ಕಾರದ ಅರ್ಹತಾ ನಿಯಮಗಳ ಬಗ್ಗೆ.

1106 (1592) **ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ):-** ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ 'ಆ' ದರ್ಜೆ ಮಾರುಕಟ್ಟೆ ಸಮಿತಿಗಳ ಬಗ್ಗೆ ಸರ್ಕಾರದ ಅರ್ಹತಾ ನಿಯಮಗಳೇನು?

ಆ) ವಿಜಾಪುರ ಕೃಷಿ ಉತ್ಪನ್ನ ಮಾರುಕಟ್ಟೆಗೆ 1993-94, 1994-95 ಮತ್ತು 1995-96ನೇ ಸಾಲಿನಲ್ಲಿ ಬಂದ ಆದಾಯವೆಷ್ಟು? (ಸಂಪೂರ್ಣ ವಿವರ ನೀಡುವುದು)

ಇ) ವಿಜಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು 'ಆ' ದರ್ಜೆಯಿಂದ ಕೆಳದರ್ಜೆಗೆ ಇಳಿಸಲಾಗಿದೆಯೇ?

ಈ) ವಿಜಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಮತ್ತೆ 'ಆ' ದರ್ಜೆಗೆ ಏರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) ರಾಜ್ಯದಲ್ಲಿರುವ ಮಾರುಕಟ್ಟೆ ಸಮಿತಿಗಳನ್ನು ಅವುಗಳ ಹಿಂದಿನ ಮಾರಾಟ ವರ್ಷದ ಮಾರುಕಟ್ಟೆ ಶುಲ್ಕ ಆದಾಯದ ಮೇಲೆ 94-95ರಲ್ಲಿ ವಿವಿಧ ವರ್ಗಗಳಾಗಿ ವರ್ಗೀಕರಿಸಲಾಗಿದೆ.

ಆ) ವಿಜಾಪುರ ಮಾರುಕಟ್ಟೆ ಸಮಿತಿಯ ಆದಾಯದ ವಿವರ ಕೆಳಕಂಡಂತಿರುತ್ತದೆ:-

ವರ್ಷ	ಮಾರುಕಟ್ಟೆ ಶುಲ್ಕ (ರೂ. ಲಕ್ಷಗಳಲ್ಲಿ)
1993-94	76.90
1994-95	164.90
1995-96	122.86

ಇ) ಈ ಹಿಂದೆ 'ಬಿ' ದರ್ಜೆಯಲ್ಲಿದ್ದು ವಿಜಾಪುರ ಮಾರುಕಟ್ಟೆ ಸಮಿತಿಯನ್ನು ಇಲಾಖಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಸಿಬ್ಬಂದಿ ಪುನರ್ ರೂಪಿಕೆಯಲ್ಲಿ 'ಸಿ' ದರ್ಜೆಗೆ ಇಳಿಸಲಾಗಿರುತ್ತದೆ.

ಈ) ಸದ್ಯಕ್ಕೆ ಇಲ್ಲ.

ವಿಷಯ:- ತೋಟಗಾರಿಕೆ ಬೆಳೆಗಳನ್ನು ವಿಸ್ತರಿಸುವುದು.

1109 (320) **ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):-** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 1995-96ನೇ ಸಾಲಿನಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ವಿಸ್ತರಿಸಲಾಗಿದೆ?